# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 29-01-2021ರ ಶುಕ್ರವಾರದಂದು ಪೂವಾಹ್ನ 11-30 ಗಂಟೆಗೆ ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡವಳಿ.**

**<u>ಹಾಜರಿದ್ದ ಸದಸ್ಯರುಗಳು:</u>**

| | | |
|---|---|---|
| 1 | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3 | ಪ್ರೊ. ಡಿ.ಆನಂದ | ಸದಸ್ಯರು |
| 4 | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5 | ಡಾ. ಚೈತ್ರ ನಾರಾಯಣ | ಸದಸ್ಯರು |
| 6 | ಶ್ರೀ ಕುಮಾರ | ಸದಸ್ಯರು |
| 7 | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8 | ಡಾ. ವೆಂಕಟೇಶ್ ಜೆ ಎನ್ | ಸದಸ್ಯರು |
| 9 | ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 10 | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 11 | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 12 | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 13 | ಡಾ. ಸೈಯದ್ ಕಾಝು ಮೊಹಿದ್ದೀನ್ | ಸದಸ್ಯರು |
| 14 | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 15 | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 16 | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |

**<u>ಹಾಜರಾಗದ ಸದಸ್ಯರು:</u>**

1. ಡಾ. ವೈ.ಎಸ್.ಹನುಮಂತರಾಯ
2. ಶ್ರೀಮತಿ ಪವಿತ್ರ ವೈ ಕೆ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಈ ಕೆಳಕಂಡ ಸದಸ್ಯರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1. ಶ್ರೀ ದಿನೇಶ್ ಎಂ ಗಾಂವಕರ್, ಪ್ರಾಂಶುಪಾಲರು, ಸಂತ ಜೋಸೆಫರ ಕಾಲೇಜು, ಹಾಸನ.
2. ಶ್ರೀ ಟಿ.ರಾಮಕೃಷ್ಣ, ಪ್ರಾಂಶುಪಾಲರು, ಎ.ಡಿ. ಬಿಳಿಗೌಡ ಪ್ರಥಮ ದರ್ಜೆ ಕಾಲೇಜು, ಕೊಪ್ಪ

ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನಗೊಂಡಿರುವ ಈ ಕೆಳಕಂಡ ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿ, ಪರಿಚಯಿಸಲಾಯಿತು.

1. ಡಾ. ಜೆ.ಎನ್.ವೆಂಕಟೇಶ್, ಪ್ರಾಂಶುಪಾಲರು, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು, ಹೆಗ್ಗಡದೇವನಕೋಟೆ.
2. ಡಾ. ವೈ.ಎಸ್.ಹನುಮಂತರಾಯಪ್ಪ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹನಗೋಡು.

ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಹಾಜರಿದ್ದ ಶ್ರೀ ಮೂಗೇಶಪ್ಪ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು ಇವರು ಮಾತನಾಡಿ ಹೊಸದಾಗಿ ನಾಮನಿರ್ದೇಶಿತಗೊಂಡಿರುವ ಡಾ. ವೈ.ಎಸ್.ಹನುಮಂತರಾಯಪ್ಪ ಅವರು ಬೇರೆ ಜಿಲ್ಲೆಗೆ ವರ್ಗಾವಣೆಗೊಂಡಿರುವುದರಿಂದ ಇವರ ಬದಲಿಗೆ ಜೇಷ್ಠತೆಯ ಅನುಸಾರ ಮತ್ತೊಬ್ಬರನ್ನು ನಾಮನಿರ್ದೇಶಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಇದನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿ, ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| **ದಿನಾಂಕ: 30-12-2020ರಂದು** ಜರುಗಿದ ಸಿಂಡಿಕೇಟಿನ 8ನೇ ಸಾಮಾನ್ಯ ಸಭೆಯ ನಡವಳಿಯನ್ನು ದೃಢೀಕರಿಸುವ ಬಗ್ಗೆ | |
| **ತೀರ್ಮಾನ** | ದೃಢೀಕರಿಸಲಾಯಿತು. |
| **ಸಾಮಾನ್ಯ ಸಭೆ 2021/1.1** | Diocesan ಕ್ರಿಶ್ಚಿಯಾನಿಟಿ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಕ್ರಿಶ್ಚಿಯಾನಿಟಿ ವಿಭಾಗದಲ್ಲಿ ಸ್ಥಾಪಿಸಲಾಗಿರುವ Diocesan ಕ್ರಿಶ್ಚಿಯಾನಿಟಿ ಪೀಠದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ Dr.Fr.John Peter Lazaar SAC ಇವರ ಅವಧಿಯು ದಿನಾಂಕ: 21-11-2020ರಂದು ಪೂರ್ಣಗೊಂಡಿರುವುದರಿಂದ, Diocesan ಕ್ರಿಶ್ಚಿಯಾನಿಟಿ ಪೀಠಕ್ಕೆ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/-ಗಳ ಗೌರವ ಸಂಭಾವನೆಯೊಂದಿಗೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2021/1.2** | Mysore School of Design ಸಂಸ್ಥೆಯ ವಿಳಾಸ ಬದಲಾವಣೆ ಮಾಡುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ದಿನಾಂಕ: 12-01-2021ರಂದು ಪರಿವೀಕ್ಷಣಾ ಸಮಿತಿಯು ವಿಳಾಸ ಬದಲಾವಣೆ ಕೋರಿರುವ ಸ್ಥಳದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ Mysore School of Design, ನಂ.29, 18ನೇ ಬ್ಲಾಕ್, ಮಧುವನ ಲೇಔಟ್, ಶ್ರೀರಾಂಪುರ 2ನೇ ಹಂತ, ಮೈಸೂರು-23 ಸಂಸ್ಥೆಯ ವಿಳಾಸವನ್ನು Mysore School of Design, ನಂ.ಸಿಎ-01, ವಿಶ್ವವಿದ್ಯಾನಿಲಯ ಬಡಾವಣೆ, ದಟ್ಟಗಳ್ಳಿ ರಿಂಗ್ ರಸ್ತೆ ಹತ್ತಿರ, ಲಿಂಗಾಂಬುದಿ, ಮೈಸೂರು-570008 ವಿಳಾಸಕ್ಕೆ ಬದಲಾವಣೆ ಮಾಡಿಕೊಳ್ಳಲು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2021/1.3 | ಕೋವಿಡ್-19 ವೈರಾಣುವಿನ ಹರಡುವಿಕೆಯಿಂದ ಒಳಗಾಗಿರುವ ಅಧ್ಯಾಪಕ / ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಮರುಭರಿಕೆ ಮಾಡುವ ಬಗ್ಗೆ. |
| ತೀರ್ಮಾನ | ದಿನಾಂಕ: 01-12-2020ರಂದು ನಡೆದ ಪರಾಮರ್ಶನ ಸಮಿತಿ ಶಿಫಾರಸ್ಸಿನನ್ವಯ, ಕೋವಿಡ್-19 ವೈರಾಣುವಿನ ಹರಡುವಿಕೆಯಿಂದ ಒಳಗಾಗಿರುವ ಅಧ್ಯಾಪಕ / ಅಧ್ಯಾಪಕೇತರ ಸಿಬ್ಬಂದಿಗಳ ವೈದ್ಯಕೀಯ ಚಿಕಿತ್ಸೆಯ ವೆಚ್ಚವನ್ನು ಅಂಗೀಕೃತವಲ್ಲದ ಆಸ್ಪತ್ರೆಗಳ ಮರುಭರಿಕೆ ಹುಂಡಿಗಳನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ನಿಯಮಾನುಸಾರ ಸರ್ಕಾರದ ದರಪಟ್ಟಿಗೆ ತಾಳೆಯಾಗುವಂತೆ ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು. |
| ಸಾಮಾನ್ಯ ಸಭೆ 2021/1.4 | ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿ ಹಾಗೂ ಗೌರವಧನ ನೀಡಲು ಅನುಮೋದನೆ ಪಡೆಯುವ ಬಗ್ಗೆ. |
| | ಮಾನ್ಯ ಕುಲಪತಿಯವರು ಮಾತನಾಡಿ, ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ 2019-20 ಜನವರಿ ಮತ್ತು 2019-20 ಜುಲೈ ವಿದ್ಯಾರ್ಥಿಗಳಿಂದ ಸ್ವಯಂ ಕಲಿಕಾ ಸಾಮಗ್ರಿಗಳನ್ನು ನೀಡುವಂತೆ ಸಾಕಷ್ಟು ಒತ್ತಡವಿರುವ ಹಿನ್ನೆಲೆಯಲ್ಲಿ ಸ್ವಯಂ ಕಲಿಕಾ ಪಠ್ಯಗಳನ್ನು ಬಾಹ್ಯ ವಿಷಯತಜ್ಞರಿಂದ ರಚಿಸಲು ದಿನಾಂಕ: 13-05-2020ರಂದು ಆದೇಶಿಸಲಾಗಿದೆ. ಪಠ್ಯ ರಚಿಸಿರುವ/ರಚಿಸುತ್ತಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಂದಾಜು ಪಟ್ಟಿಯನ್ನು ಈಗಾಗಲೇ ದಿನಾಂಕ: 01-10-2020 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಯಿತು. ಸ್ನಾತಕ ಮತ್ತು ಸ್ನಾತಕೋತ್ತರ ಪದವಿಯ ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸಲ್ಲಿಸುವಂತೆ ಸಿಂಡಿಕೇಟ್ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರಂತೆ ಸಂಬಂಧಪಟ್ಟ ಕೋರ್ಸುಗಳ ಪಠ್ಯವನ್ನು ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸಿಂಡಿಕೇಟ್ ಅನುಮೋದಿಸಿದ್ದಲ್ಲಿ ಗೌರವಧನ ನೀಡಲು ಕ್ರಮವಹಿಸಲಾಗುವುದೆಂದು ತಿಳಿಸಿದರು.<br><br>ಡಾ.ಎಂ.ಎಸ್.ದಾಮೋದರ ಅವರು ಮಾತನಾಡಿ, ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸಂಬಂಧಪಟ್ಟ ಕೋರ್ಸುಗಳ ಅಧ್ಯಯನ ಮಂಡಳಿಯಿಂದ ಅನುಮೋದನೆ ಪಡೆದಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಯವರು ಸಂಬಂಧಪಟ್ಟ ಕೋರ್ಸುಗಳ ಸಂಯೋಜಕರು ~~ಹಾಗೂ~~ ಅಧ್ಯಯನ ಮಂಡಳಿಯಿಂದ ಅನುಮೋದನೆಗೊಂಡ ಅಧ್ಯಾಪಕರುಗಳ ಪಟ್ಟಿಗಳಿಗೆ ಮಾತ್ರ ಗೌರವಧನ ಪಾವತಿಸಲಾಗುವುದೆಂದು ತಿಳಿಸಿದರು. |
| ತೀರ್ಮಾನ | ದೂರ ಶಿಕ್ಷಣ ನಿರ್ದೇಶನಾಲಯ ಕಾರ್ಯಕ್ರಮದಡಿಯಲ್ಲಿ ಜರುಗುವ ಸ್ನಾತಕ ಹಾಗೂ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಪಠ್ಯ ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸಂಬಂಧಪಟ್ಟ ಕೋರ್ಸುಗಳ ಸಂಯೋಜಕರು ~~ಹಾಗೂ~~ ಅಧ್ಯಯನ ಮಂಡಳಿಯು ಅನುಮೋದಿಸಿರುವ ಅಧ್ಯಾಪಕರುಗಳ ಪಟ್ಟಿಗಳಿಗೆ ಗೌರವಧನ ಪಾವತಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2021/1.5 | IIFA Lancaster Degree College ಸಂಸ್ಥೆಯು ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ದಿನಾಂಕ: 21-01-2021ರಂದು ಪರಿವೀಕ್ಷಣಾ ಸಮಿತಿಯು ವಿಳಾಸ ಬದಲಾವಣೆ ಕೋರಿರುವ ಸ್ಥಳದಲ್ಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ IIFA Lancaster Degree College, ನಂ.370/1, ಡಿ.ಸುಬ್ಬಯ್ಯ ಅಡ್ಡರಸ್ತೆ, ಸಿ.ಆರ್.ಮೊಹಲ್ಲಾ, ಮೈಸೂರು-570024 ಸಂಸ್ಥೆಯ ವಿಳಾಸವನ್ನು IIFA Lancaster Degree College, ನಂ.55/ಎ, ಅರಕೇಶ್ವರ |

ದೇವಸ್ಥಾನದ ರಸ್ತೆ, ಶ್ರೀನಿವಾಸಪುರ ಗೇಟ್, ಮಂಡ್ಯ-571 404 ವಿಳಾಸಕ್ಕೆ ಬದಲಾವಣೆ ಮಾಡಿಕೊಳ್ಳಲು ಪರಿವೀಕ್ಷಣ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು.

**ಸಾಮಾನ್ಯ ಸಭೆ 2021/1.6**

ಮೈಸೂರು ವಿಶ್ವವಿದ್ಯಾನಿಲಯ ವಿವಿಧ ಸಂಸ್ಥೆಗಳೊಡನೆ ಮಾಡಿಕೊಂಡಿರುವ ಒಡಂಬಡಿಕೆಗಳಿಗೆ ಸ್ಥಿರೀಕರಣವನ್ನು ಕೋರುವ ಬಗ್ಗೆ.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನೆ, ಜ್ಞಾನ ವಿನಿಮಯ ಹಾಗೂ ಉನ್ನತೀಕರಣ ಇಂತಹ ಹಲವಾರು ಉದ್ದೇಶಗಳಿಂದ ವಿವಿಧ ಸಂಸ್ಥೆ/ ಕೇಂದ್ರ ಸರ್ಕಾರಿ ಸ್ವಾಮ್ಯದ ಅಂಗ ಸಂಸ್ಥೆಗಳೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವ ಉದ್ದೇಶದಿಂದ ಕೆಳಕಂಡ ಕೋಷ್ಟಕದಲ್ಲಿ ಸೂಚಿಸಿರುವ ಸಂಸ್ಥೆಗಳೊಡನೆ ಅವುಗಳ ಮುಂದೆ ನಮೂದಿಸಿರುವ ವಿಷಯಗಳಲ್ಲಿ ಒಡಂಬಡಿಕೆಗಳನ್ನು (Memorandum of Understanding) ಮಾಡಿಕೊಂಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.

| Sl. No | Memorandum of Understanding (MOU) | | | |
|---|---|---|---|---|
| | **Between** | | **Subject** | **Entered on** |
| 1 | Asian Polymers, Tubinakere, Mandya. | University of Mysore, Mysuru | Corporate Social Responsibility | December 2020 |
| 2 | Central Drug Research Institute, Luknow. | University of Mysore, Mysuru | Strengthen the Drug Discovery Research | December 2020 |
| 3 | Indian Institute of Chemical Technology, Hyderabad | University of Mysore, Mysuru | Strengthen the Drug Discovery Research at VijnanaBhavan | January 2021 |

**ಸಾಮಾನ್ಯ ಸಭೆ 2021/1.7**

GETS Academy ಮೈಸೂರು ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ ವಿವಿಧ ಕೋರ್ಸುಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ.

ದಿನಾಂಕ: 20-01-2021 ರಂದು ಮೈಸೂರು ವಿಶ್ವವಿದ್ಯಾನಿಲಯದ ತಜ್ಞರನ್ನೊಳಗೊಂಡ ಪರಿವೀಕ್ಷಣಾ ಸಮಿತಿಯು GETS Academy, # CA-40, ಹೂಟಗಳ್ಳಿ ಕೈಗಾರಿಕಾ ವಲಯ, ಬೆಳವಾಡಿ ಪೆಟ್ರೋಲ್ ಬಂಕ್ ಹತ್ತಿರ, ಬೆಳವಾಡಿ, ಮೈಸೂರು ಸಂಸ್ಥೆಯಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ, ವರದಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸನ್ನು ನೀಡಿರುತ್ತದೆ.

"The expert committee recommends the granting of recognition for specialized programmes in **1. B.Com.-Hons (E-Commerce & Digital Marketing)** with an intake of forty (40) **2. B.Com.-Hons (Finance & Investment)** with an intake of forty (40). **3.B.Com-Hons (International Accounting & Finance)** with an intake of forty (40) **4. BBA-Hons (Business Analytics)** with an intake of forty(40). **5. BBA-Hons. (Sustainable Development & Environment Management) with an intake of forty (40) 6. BBA-Hons. (International Business)** with an intake of forty(40) to GETS Academy, # CA-40, Hootagalli Industrial area, Near Belavadi Petrol Bunk, Belavadi, Mysuru under the provision of "The University of Mysore-Recognition

| | |
|---|---|
| | of Certain Institutions for Specified Studies/Specialized and Research Statutes 2008" from the **academic year 2021-22.** |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ, GETS Academy, # CA-40, ಹೂಟಗಳ್ಳ ಕೈಗಾರಿಕಾ ವಲಯ, ಬೆಳವಾಡಿ ಪೆಟ್ರೋಲ್ ಬಂಕ್ ಹತ್ತಿರ, ಬೆಳವಾಡಿ, ಮೈಸೂರು ಈ ಸಂಸ್ಥೆಗೆ Specialized Programme ಅಡಿಯಲ್ಲಿ **1.B.Com.-Hons (E-Commerce & Digital Marketing) 2. B.Com.-Hons (Finance & Investment) 3. B.Com-Hons (International Accounting & Finance) 4. BBA-Hons (Business Analytics) 5. BBA-Hons. (Sustainable Development & Environment Management) and 6.BBA-Hons. (International Business)** ಕೋರ್ಸುಗಳನ್ನು ಪ್ರತಿ ಕೋರ್ಸಿಗೆ 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಂದಿಗೆ 2021-22ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **ಸಾಮಾನ್ಯ ಸಭೆ** 2021/1.8 | ಅಖಿಲಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯೊಡನೆ ಮಾಡಿಕೊಂಡಿರುವ MoU ಸಂಬಂಧ ವಿಷಯವನ್ನು ಮರುಮಂಡಿಸುವ ಬಗ್ಗೆ. |
| | ಅಖಿಲಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಸಂಸ್ಥೆಯು ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ಪಡೆದು, **1. Audiology 2. Speech Language Pathology 3. Speech and Hearing 4. Linguistics and 5. Special Education** ಒಟ್ಟು ಐದು ವಿಷಯಗಳಲ್ಲಿ ಸಂಶೋಧನೆಯನ್ನು ಕೈಗೊಂಡು ಕಾರ್ಯ ನಿರ್ವಹಿಸುತ್ತಿದೆ. ಈ ಸಂಬಂಧ ಸದರಿ ಸಂಸ್ಥೆಯ ನಿರ್ದೇಶಕರು ಈ ಸಂಸ್ಥೆಯು **Ministry of Health and Family Welfare** ಭಾರತ ಸರ್ಕಾರದ ಅಡಿಯಲ್ಲಿ ಸ್ವಾಯತ್ತತೆಯನ್ನು ಹೊಂದಿರುವುದಾಗಿ ತಿಳಿಸಿ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪಿಹೆಚ್.ಡಿ ಪ್ರವೇಶ ಪರೀಕ್ಷೆಯನ್ನು ಪ್ರತ್ಯೇಕವಾಗಿ ಪ್ರತಿ ವರ್ಷ ತಮ್ಮ ಸಂಸ್ಥೆಯಲ್ಲಿಯೇ ನಡೆಸಿಕೊಳ್ಳುವ ಸಂಬಂಧ ಒಡಂಬಡಿಕೆಯಲ್ಲಿ ಕೆಲವು ಅಂಶಗಳನ್ನು ಸೇರ್ಪಡೆಗೊಳಿಸಿ, ಮಾರ್ಪಾಡು ಮಾಡಿಕೊಡುವಂತೆ ಕೋರಿರುವ ವಿಷಯವನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿತು. |
| **ತೀರ್ಮಾನ** | ಪ್ರಸ್ತುತ ಅಖಿಲಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯೊಡನೆ ಮಾಡಿಕೊಂಡಿರುವ **MOU** ನಲ್ಲಿ **Terms and Conditions** ನ **Clause 3.7(a)*** ಆಗಿ ಕೆಳಕಂಡ ಅಂಶವನ್ನು ಸೇರ್ಪಡೆಗೊಳಿಸುವ ಸಂಬಂಧದ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು.<br><br>* 3.7(a) All India Institute of Speech and Hearing (AIISH) is an autonomous institute under the Ministry of Health and Family Welfare of Government of India. Hence hereinafter AIISH is permitted to conduct the Ph.D entrance test for Admitting candidates to Ph.D Programme. The candidates taking entrance test conducted by AIISH are exempted from the entrance test conducted by the University. The Ph.D students of AIISH are offered registration by the University as per the Ph.D regulations and students will have to pay the prescribed fees as per University norms" |

| | |
|---|---|
| **ಸಾಮಾನ್ಯ ಸಭೆ 2021/1.9** | 2020-21ನೇ ಶೈಕ್ಷಣಿಕ ಸಾಲಿನ ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ಉಳಿದಿರುವ ಸೀಟುಗಳನ್ನು ಭರ್ತಿ ಮಾಡಲು ಹಾಗೂ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೋಟಾದ ಸೀಟುಗಳ ಬಗ್ಗೆ. |
| | ಡಾ.ಈ.ಸಿ.ನಿಂಗರಾಜ್ ಗೌಡ, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಬಹುತೇಕ ಸ್ನಾತಕೋತ್ತರ ವಿಭಾಗಗಳಲ್ಲಿ ಪ್ರವೇಶಾತಿ ನಂತರವೂ ಸ್ಕೀಂ-'ಎ'ನಲ್ಲೂ ವಿಶ್ವವಿದ್ಯಾನಿಲಯದಿಂದ ನಿಗಧಿಯಾಗಿರುವಷ್ಟು ಪ್ರವೇಶಾತಿ ಆಗಿರುವುದಿಲ್ಲ. (ಮೈಸೂರು ವಿಶ್ವವಿದ್ಯಾನಿಲಯದ ಮತ್ತು ಇತರ ವಿಶ್ವವಿದ್ಯಾನಿಲಯಗಳಲ್ಲೂ ಪದವಿ ಫಲಿತಾಂಶದ ವಿಳಂಬ, ಅಂಕಪಟ್ಟಿ ಸಿಗದೆ ಇರುವುದು, ಕೋವಿಡ್-19 ಈ ರೀತಿಯ ಹಲವು ಕಾರಣಗಳಿಂದಾಗಿ ವಿದ್ಯಾರ್ಥಿಗಳು ಪ್ರವೇಶಾತಿಗೆ ಅರ್ಜಿಯನ್ನು ಸಲ್ಲಿಸಲು ಆಗಿರುವುದಿಲ್ಲ) ಹಾಗೆಯೇ ಪ್ರವೇಶಾತಿ ಸಂದರ್ಭದಲ್ಲಿ **Literary and Cultural** ಕೋಟಾದಲ್ಲಿ ಪ್ರವೇಶಾತಿ ನೀಡುವ ಸಂದರ್ಭದಲ್ಲಿ ಯಾವ ನಿಯಮ ಪಾಲಿಸದೆ ಇರುವುದರಿಂದ ಅರ್ಹ ಅಭ್ಯರ್ಥಿಗಳು ಇದ್ದರು ಪ್ರವೇಶ ನೀಡದೆ ಇರುವುದನ್ನು ಸರಿಪಡಿಸಬೇಕು ಮತ್ತು ಖಾಲಿ ಇರುವ ಇನ್ನುಳಿದ ಸ್ನಾತಕೋತ್ತರ ವಿಭಾಗಗಳ ಸ್ಥಾನಗಳ ಪ್ರವೇಶಕ್ಕೆ ಮರುಸೂಚನೆಯನ್ನು ಹೊರಡಿಸಬೇಕೆಂದು ಕೋರಿರುವ ಮನವಿಯನ್ನು ಸಭೆಯು ಕೂಲಂಕುಷವಾಗಿ ಪರಿಶೀಲಿಸಿತು. |
| **ತೀರ್ಮಾನ** | ಸರ್ಕಾರ ಅನುಮೋದನೆ ಸಂಖ್ಯೆ: ಇಡಿ 125/ಯು.ಎಂ.ಎಸ್/2000 ದಿ.04-09-2000 ರ **Revised Regulations** ನಲ್ಲಿ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೋಟಾದಡಿಯಲ್ಲಿ 01 ರಿಂದ 03ನೇ ಸ್ಥಾನಗಳನ್ನು ಗಳಿಸಿದ್ದ ವಿದ್ಯಾರ್ಥಿಗಳು ಮಾತ್ರ ಅರ್ಹರಿರುತ್ತಾರೆಂದು ನಿಯಮದ ಪ್ರಕಾರ ಪ್ರವೇಶಾತಿ ನೀಡಲಾಗಿದ್ದು, ಹಾಗೆಯೇ ಸದರಿ ವಿನಿಯಮದಲ್ಲಿ ಕಂಡಿಕೆ 1.5ರಲ್ಲಿ ಏನಾದರೂ ವಿಶೇಷ ತೊಂದರೆಗಳು ಎದುರಾದಲ್ಲಿ/ ಕಂಡುಬಂದಲ್ಲಿ ಮಾನ್ಯ ಕುಲಪತಿಯವರ ಪೂರ್ವಾನುಮತಿ ಮೇರೆಗೆ ಒಂದು ಪರಿಣಿತರ ಸಮಿತಿ ರಚಿಸಿ, ಮುಂದಿನ ಕ್ರಮವಹಿಸಬಹುದಾದ ವಿಷಯವನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2021/1.10** | ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ Defense ಮತ್ತು ಕನ್ನಡ ಮಾಧ್ಯಮ ಕೋಟಾದಡಿಯ ಪ್ರವೇಶಾತಿಗೆ ಇರುವ ನಿಯಮಗಳನ್ನು ಮಾರ್ಪಡಿಸುವ ಬಗ್ಗೆ. |
| | ಡಾ.ಚೈತ್ರ ನಾರಾಯಣ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ತಮ್ಮ ಪತ್ರದಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ **Defence** ಕೋಟಾದಡಿ ಮತ್ತು ಕನ್ನಡ ಮಾಧ್ಯಮದಡಿ ಪ್ರವೇಶಾತಿ ನೀಡುವಲ್ಲಿ ಇರುವ ನಿಯಮಗಳನ್ನು ಮಾರ್ಪಡಿಸುವಂತೆ ಕೋರಿರುವ ವಿಷಯವನ್ನುಸಭೆಯು ಕೂಲಂಕುಷವಾಗಿ ಪರಿಶೀಲಿಸಿತು.<br><br>ಮಾನ್ಯ ಸದಸ್ಯರಾದ ಡಾ.ಚೈತ್ರ ನಾರಾಯಣ್‌ರವರು ಮಾತನಾಡಿ, ವಿಧವೆಯರು ಹಾಗೂ ಅವರ ಮಕ್ಕಳಿಗೆ ಒಂದು ಸೀಟನ್ನು ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ **Defence** ಕೋಟಾದಡಿ ನೀಡಬೇಕೆಂದು ಸಭೆಯನ್ನು ಕೋರಿದರು.<br><br>ಅಧ್ಯಕ್ಷರು ಮಾತನಾಡಿ, **Defence** ಕೋಟಾದಡಿ ಸೀಟುಗಳನ್ನು ಹಂಚಿಕೆ ಮಾಡುವ ಬಗ್ಗೆ ಸರ್ಕಾರದ ಮಾರ್ಗಸೂಚಿಯನ್ನು ಅನುಸರಿಸಲಾಗುತ್ತದೆ. ವಿಶ್ವವಿದ್ಯಾನಿಲಯದಿಂದ ಯಾವ ಮಾರ್ಗಸೂಚಿಗಳನ್ನು ಅಳವಡಿಸಿರುವುದಿಲ್ಲ. ಇದರ ಬಗ್ಗೆ ಪರಿಶೀಲಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದರು.<br><br>1. ಮಾನ್ಯ ಸದಸ್ಯರಾದ ಡಾ.ಚೈತ್ರ ನಾರಾಯಣ್‌ರವರು ಕನ್ನಡ ಮಾಧ್ಯಮದಡಿ ಪ್ರವೇಶಾತಿಯನ್ನು ಸರ್ಕಾರಿ ಕಾಲೇಜು ಹಾಗೂ ಇತರೆ ಕಾಲೇಜುಗಳಲ್ಲಿ ನೀಡದಿರುವ ಬಗ್ಗೆ ತಿಳಿಸಿ. ಸ್ಕೀಂ-'ಬಿ'ನಲ್ಲಿ ಒಂದು ಸೀಟನ್ನು ನೀಡುವಂತೆ ಸಭೆಯನ್ನು ಕೋರಿದರು. |

| | |
|---|---|
| | ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಮಾತನಾಡಿ, ವಿಶ್ವವಿದ್ಯಾನಿಲಯದಿಂದ ಹೊರಡಿಸುವ ಯಾವುದೇ ಮಾರ್ಗಸೂಚಿಗಳು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಘಟಕ ಕಾಲೇಜು / ಅಧ್ಯಯನ ವಿಭಾಗಗಳಿಗೆ/ಸ್ನಾತಕೋತ್ತರ ಕೇಂದ್ರಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸಿದರು.<br>2. ಮಾನ್ಯ ಸದಸ್ಯರಾದ ಶ್ರೀ. ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಸದರಿ ವಿಷಯದ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಶಿಫಾರಸ್ಸು ಪಡೆಯುವ ಬಗೆಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಮತ್ತು ಡಾ. ಈ.ಸಿ.ನಿಂಗರಾಜಗೌಡ ಅವರು ಸಹ ತಮ್ಮ ಸಹಮತ ವ್ಯಕ್ತಪಡಿಸಿದರು. |
| ತೀರ್ಮಾನ | 1. 2021-22ನೇ ಶೈಕ್ಷಣಿಕ ಸಾಲಿನ **Admission Reformation and Regulation Implementation Committee**ಗೆ ವಿಷಯವನ್ನು ಮಂಡಿಸಿ ಮಾರ್ಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲು; ಹಾಗೂ<br>2. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ **Defense** ಮತ್ತು ಕನ್ನಡ ಮಾಧ್ಯಮ ಕೋಟಾದಡಿಯ ಪ್ರವೇಶಾತಿಗೆ ಇರುವ ನಿಯಮಗಳನ್ನು ಮಾರ್ಪಡಿಸುವ ಬಗ್ಗೆ ಸರ್ಕಾರದಿಂದ ಹೊರಡಿಸಿರುವ ಮಾರ್ಗಸೂಚಿಗಳನ್ನು ಪರಿಶೀಲಿಸಿ, ತಜ್ಞರ ಸಲಹೆ ಪಡೆದು ಅದರಂತೆ ಅಗತ್ಯ ಕ್ರಮಕೈಗೊಳ್ಳಲು ತೀರ್ಮಾನಿಸಿತು. |
| **ಸಾಮಾನ್ಯ ಸಭೆ**<br>2021/1.11 | 101ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆಯಲು ಗಣ್ಯರ ಹೆಸರುಗಳನ್ನು ಶಿಫಾರಸ್ಸು ಮಾಡುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ 101ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರಧಾನ ಮಾಡಲು ಗಣ್ಯರ ಹೆಸರುಗಳನ್ನು ನಿವೃತ್ತ ಕುಲಪತಿಗಳ/ನಿವೃತ್ತ ಸರ್ವೋಚ್ಛ ನ್ಯಾಯಾಲಯದ ನ್ಯಾಯಾದೀಶರ/ನಿವೃತ್ತ ಉಚ್ಛ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಡುವ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಿ ಸಮತಿಯು ಮಾಡುವ ಶಿಫಾರಸ್ಸಿನ ಅನ್ವಯ ಗಣ್ಯರ ಪಟ್ಟಿಯನ್ನು ಮಾನ್ಯ ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ**<br>2021/1.12 | ವಿಶ್ವವಿದ್ಯಾನಿಲಯದ 101ನೇ ವಾರ್ಷಿಕ ಘಟಿಕೋತ್ಸವದ ಸಂಬಂಧ ದಿನಾಂಕ, ಸಮಯ, ಸ್ಥಳ ನಿಗಧಿಪಡಿಸುವ ಹಾಗೂ ಮುಖ್ಯ ಅತಿಥಿಗಳನ್ನು ಆಹ್ವಾನಿಸುವ ಬಗೆಗೆ. |
| | ಮಾನ್ಯ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ, ರಾಜಕೀಯ ವ್ಯಕ್ತಿಗಳಲ್ಲದ ಭಾರತ ದೇಶದ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿರವರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸುವ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. |
| ತೀರ್ಮಾನ | 101ನೇ ವಾರ್ಷಿಕ ಘಟಿಕೋತ್ಸವವನ್ನು ಏರ್ಪಡಿಸಲು ದಿನಾಂಕ, ಸಮಯ ಹಾಗೂ ಸ್ಥಳ ನಿಗದಿಪಡಿಸುವ ಬಗ್ಗೆ ಮತ್ತು ಘಟಿಕೋತ್ಸವಕ್ಕೆ ಮುಖ್ಯ ಅತಿಥಿಯನ್ನು ಆಹ್ವಾನಿಸಲು ಒಂದು ಸಮಿತಿ ರಚನೆ ಮಾಡಿ, ಮೂರು ಮಂದಿ ಗಣ್ಯವ್ಯಕ್ತಿಗಳು/ಶಿಕ್ಷಣತಜ್ಞರ ಪಟ್ಟಿಯನ್ನು ಗೌಪ್ಯವಾಗಿ ಒಂದು ವಾರದೊಳಗಾಗಿ ಕುಲಾಧಿಪತಿಗಳಿಗೆ ಶಿಫಾರಸ್ಸು ಮಾಡುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2021/1.13 | ಮರುಮೌಲ್ಯಮಾಪನ ಶುಲ್ಕವನ್ನು ಮರುಭರಿಕೆ ಮಾಡುವ ಕುರಿತು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ ಮಂಡಿಸಿರುವ ವಿಷಯ. |
| | ಮಾನ್ಯ ಸದಸ್ಯರಾದ ಶ್ರೀ. ಆರ್. ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ, ಮೊದಲನೇ ಮೌಲ್ಯಮಾಪನದಲ್ಲಿ ಕಡಿಮೆ ಅಂಕಗಳು ಬಂದಿದ್ದು, ಮರುಮೌಲ್ಯಮಾಪನ ಮಾಡಿದಾಗ ಹೆಚ್ಚು ಅಂತರದೊಂದಿಗೆ ಅಂಕಗಳು ಬಂದಾಗ, ಮೊದಲನೇ ಮೌಲ್ಯಮಾಪನ ಮಾಡಿರುವ ಶಿಕ್ಷಕರಿಗೆ ಇನ್ನು ಮುಂದೆ ಈ ರೀತಿ ತಪ್ಪುಗಳು ಆಗದಂತೆ ಕರ್ತವ್ಯ ನಿರ್ವಹಿಸುವಂತೆ ಸಂದೇಶ ಕಳುಹಿಸಬೇಕೆಂದು ಸಲಹೆ ನೀಡಿದರು.<br>ಮಾನ್ಯ ಸದಸ್ಯರಾದ ಡಾ.ಈ.ಸಿ.ನಿಂಗರಾಜ್ ಗೌಡರವರು ಮಾತನಾಡುತ್ತಾ ಅನುತ್ತೀರ್ಣಗೊಂಡ ವಿದ್ಯಾರ್ಥಿಯು ಮರುಮೌಲ್ಯಮಾಪನದಿಂದ ಉತ್ತೀರ್ಣನಾದರೆ **Automatic** ಆಗಿ ಶುಲ್ಕ ಮರುಭರಿಕೆ ಆಗಬೇಕು ಹಾಗೂ ಸದರಿ ಶುಲ್ಕವನ್ನು ಮೌಲ್ಯಮಾಪನ ಮಾಡಿರುವ ಶಿಕ್ಷಕರಿಂದ ವಸೂಲಿ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>ಮಾನ್ಯ ಸದಸ್ಯರಾದ ಡಾ.ಎಂ.ಎಸ್.ದಾಮೋದರರವರು ಮಾತನಾಡಿ, ಮೊದಲನೇ ಮೌಲ್ಯಮಾಪನ ಹಾಗೂ ಎರಡನೇ ಮೌಲ್ಯಮಾಪನದಿಂದ 05 ಅಂಕಗಳಿಗಿಂತ ಹೆಚ್ಚಿಗೆ ಬಂದರೆ ಮರುಮೌಲ್ಯಮಾಪನ ಶುಲ್ಕವನ್ನು ಮರುಭರಿಕೆ ಮಾಡಿಕೊಳ್ಳಲು ಅವಕಾಶ ನೀಡಬಹುದೆಂದರು. |
| ತೀರ್ಮಾನ | ಮರುಮೌಲ್ಯಮಾಪನ ಶುಲ್ಕವನ್ನು ಮರುಭರಿಕೆ ಮಾಡುವ ಕುರಿತು ಸುಧೀರ್ಘ ಚರ್ಚೆಯ ನಂತರ ಸಭೆಯು ಮೊದಲನೇ ಫಲಿತಾಂಶಕ್ಕಿಂತ ಮರುಮೌಲ್ಯಮಾಪನ ಫಲಿತಾಂಶದಲ್ಲಿ ಶೇ.10ಕ್ಕಿಂತ ಹೆಚ್ಚು ಅಂಕಗಳಿಸಿರುವ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ ಮರುಮೌಲ್ಯಮಾಪನಕ್ಕಾಗಿ ಪಾವತಿಸಿರುವ ಪೂರ್ಣ ಶುಲ್ಕವನ್ನು ಮರುಭರಿಕೆ ಮಾಡಿಕೊಡುವುದು ಹಾಗೂ ಸದರಿ ಶುಲ್ಕವನ್ನು ಮೊದಲನೇ ಮೌಲ್ಯಮಾಪನ ಮಾಡಿರುವ ಮೌಲ್ಯಮಾಪಕರಿಂದ ವಸೂಲಿ ಮಾಡಲು ಈಗಾಗಲೇ ಇರುವ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/1.14 | ವಿಶ್ವವಿದ್ಯಾನಿಲಯಕ್ಕೆ ಸೇರಿದ ವಾಹನ ಸಂಖ್ಯೆ-ಕೆ.ಎ.-09, ಎಂ.ಎ.-3593ರ ಝ್ಯುಲೋ ಅಪಘಾತಕ್ಕೀಡಾಗಿ ನ್ಯಾಯಾಲಯಕ್ಕೆ ದಂಡವನ್ನು ಪಾವತಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪವೆಸಗಿರುವ ಉದ್ಯೋಗಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| | ಮಾನ್ಯ ಸದಸ್ಯರಾದ ಶ್ರೀ.ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಶ್ರೀ.ವಿ.ಶ್ರೀನಿವಾಸ್, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ಆರೋಪವೂ ಸಾಬೀತಾಗಿರುವುದರಿಂದ ದಿನಾಂಕ 24.04.2018 ರಂದು ವಿಶ್ವವಿದ್ಯಾನಿಲಯವು ಪಾವತಿಸಿರುವ ಒಟ್ಟು ರೂ. 1,73,662/-ಗಳಿಗೆ ಇಲ್ಲಿಯವರೆವಿಗೂ ಬಡ್ಡಿಸಮೇತ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |
| ತೀರ್ಮಾನ | ಶ್ರೀ.ವಿ.ಶ್ರೀನಿವಾಸ್, ಪ್ರಥಮ ದರ್ಜೆ ಗುಮಾಸ್ತರು, ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವಿರುದ್ಧ ಆರೋಪವೂ ಸಾಬೀತಾಗಿರುವುದರಿಂದ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ಬೆಂಗಳೂರು ಇವರು ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 18ನೇ ಇವಿ 2001, ದಿನಾಂಕ 14-09-2001ರ ಅನ್ವಯ ಸರ್ಕಾರಿ ನೌಕರನ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಯಲ್ಲಿ ನೌಕರನ ವಿರುದ್ಧ ಸಾಬೀತಾದ ಆರೋಪಗಳಿಗೆ ಅನುಗುಣವಾಗಿ ಈ ಕೆಳಕಂಡಂತೆ ಶಿಕ್ಷೆಯನ್ನು ಸದರಿಯವರಿಗೆ ವಿಧಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>1. ಸದರಿರವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯುವುದು.<br>2. ವಿಶ್ವವಿದ್ಯಾನಿಲಯಕ್ಕೆ ಸೇರಿದ ವಾಹನ ಸಂಖ್ಯೆ-ಕೆ.ಎ-09, ಎಂ.ಎ-3593ರ ಝ್ಯುಲೋ ಅಪಘಾತಕ್ಕೀಡಾಗಿ ನ್ಯಾಯಾಲಯಕ್ಕೆ ದಂಡವನ್ನು ದಿನಾಂಕ 24.04.2018 ರಲ್ಲಿ ಪಾವತಿಸಿರುವ ಒಟ್ಟು ರೂ. 1,73,662/-ಗಳಿಗೆ ಇಲ್ಲಿಯವರೆವಿಗೂ ಬಡ್ಡಿಸಮೇತ ವಸೂಲಿ ಮಾಡುವುದು. |

| | |
|---|---|
| ಸಾಮಾನ್ಯ ಸಭೆ 2021/1.15 | ಕಾಮಗಾರಿಗಳ ಅಂದಾಜು ಮೊತ್ತಗಳಿಗೆ ಅನುಮೋದನೆ ನೀಡುವ ಬಗ್ಗೆ. |
| ತೀರ್ಮಾನ | ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ಹಾಗೂ ನ್ಯಾಕ್ ಸಮಿತಿಯು ಪರಿಶೀಲನೆಗೆ ಭೇಟಿ ನೀಡುವ ಮೊದಲು ಈ ಕೆಳಕಂಡ 03 ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಂಬಂಧ ಕರ್ನಾಟಕ ರಾಜ್ಯದ ಪಾರದರ್ಶಕ ನಿಯಮಗಳನ್ನು ಅನುಸರಿಸಿ, ಅಲ್ಪಾವಧಿ ಟೆಂಡರ್ ಪ್ರಕ್ರಿಯೆ ಮೂಲಕ ಕೈಗೊಂಡಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಸಮರ್ಥಿಸಿತು.<br><br>1. Furnishing of School of Planning and Architecture building at University of Mysore, Manasagangotri, Mysuru Rs. 4,99,00,000/-<br>2. Furnishing of Humanities Block at University of Mysore, Manasagangotri, Mysuru Rs.4,98,00,000/-<br>3. Furnishing of Senate Bhavan Auditorium and Supply of Laptops to CPDPS, University of Mysore, Manasagangotri, Mysuru- Rs.6,48,00,000/- |
| ಸಾಮಾನ್ಯ ಸಭೆ 2021/1.16 | 2020-21ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ವರ್ಷದ ಎಂ.ಬಿ.ಎ. ಕೋರ್ಸ್‌ಗೆ Sponsored by B.N. Bahadur Foundationನ ಕೋಟಾದಡಿಯಲ್ಲಿ 09 ವಿದ್ಯಾರ್ಥಿಗಳಿಗೆ ಪ್ರವೇಶಾತಿ ನೀಡುವ ಬಗ್ಗೆ. |
| ತೀರ್ಮಾನ | ಕಾರ್ಯಸೂಚಿಯಲ್ಲಿ ಮಂಡಿಸಲಾಗಿರುವ ಅಂಶಗಳನ್ನು ಅವಲೋಕಿಸಿದ ಸಿಂಡಿಕೇಟ್ 2016-17 ನೇ ಶೈಕ್ಷಣಿಕ ಸಾಲಿನಿಂದ ಪ್ರವೇಶಾತಿಗೆ ಅವಕಾಶ ಕಲ್ಪಿಸುತ್ತಿರುವಂತೆ 2020-21ನೇ ಶೈಕ್ಷಣಿಕ ವರ್ಷಕ್ಕೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (KEA) ನಡೆಸುವ PGCET ಪರೀಕ್ಷೆಯಲ್ಲಿ ರ್‍ಯಾಂಕ್ ಹೊಂದಿರುವ ಅರ್ಹ 09 ವಿದ್ಯಾರ್ಥಿಗಳಿಗೆ B.N. Bahadur Foundationನ ಕೋಟಾದಡಿಯಲ್ಲಿ ಕೋರ್ಸಿಗೆ ಪ್ರವೇಶ ನೀಡಲು ಮತ್ತು ಪ್ರತಿ ವರ್ಷವೂ ಅರ್ಹ 09 ವಿದ್ಯಾರ್ಥಿಗಳಿಗೆ B.N. Bahadur Foundation ಕೋಟಾದಡಿಯಲ್ಲಿ ಕೋರ್ಸಿಗೆ ಪ್ರವೇಶ ನೀಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/1.17 | ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಇಂಗ್ಲೀಷ್ ಅಧ್ಯಯನ ವಿಭಾಗದ ಪ್ರೊ. ಎಲ್. ದೇವಿಕಾರಾಣಿ ಇವರನ್ನು ಇಂಗ್ಲೀಷ್ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರಿಸುವ ಬಗ್ಗೆ. |
| ತೀರ್ಮಾನ | ಪ್ರೊ.ಎಲ್.ದೇವಿಕಾರಾಣಿ, ಇಂಗ್ಲೀಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ತಮ್ಮನ್ನು ಸದರಿ ವಿಭಾಗದ ಅಧ್ಯಕ್ಷ ಸ್ಥಾನದಿಂದ ಬಿಡುಗಡೆಗೊಳಿಸಿದ ವಿಶ್ವವಿದ್ಯಾನಿಲಯದ ಕ್ರಮವನ್ನು ಪ್ರಶ್ನಿಸಿ ದಾಖಲಿಸಿದ ರಿಟ್ ಅರ್ಜಿ ಸಂಖ್ಯೆ: 5638/2020 (S-RES) ಪ್ರಕರಣದಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಛ ನ್ಯಾಯಾಲಯವು ವಿ.ವಿ.ಆದೇಶವನ್ನು ದಿನಾಂಕ: 15-01-2021 ರಂದು ರದ್ದುಗೊಳಿಸಿ, ಸದರಿಯವರ ವಿರುದ್ಧದ ಆಪಾದನೆ ಸಂಬಂಧ ಅವರಿಗೆ ನೋಟೀಸ್ ಜಾರಿ ಮಾಡಿ ತೀರ್ಪಿನ ಪ್ರತಿ ಸ್ವೀಕೃತಿಗೊಂಡ ಮೂರು ತಿಂಗಳ ಒಳಗಾಗಿ ವಿಚಾರಣೆ ಪೂರ್ಣಗೊಳಿಸಿ ನಿಯಮಾನುಸಾರ ಸೂಕ್ತ ಆದೇಶ ಹೊರಡಿಸಿ ಕ್ರಮ ಕೈಗೊಳ್ಳುವಂತೆ ಆದೇಶಿಸಿರುವ ಹಿನ್ನೆಲೆಯಲ್ಲಿ ಸಿಂಡಿಕೇಟ್ ಸಭೆಯು ಈ ಕೆಳಕಂಡಂತೆ ನಿರ್ಣಯವನ್ನುಕೈಗೊಂಡಿತು.<br><br>1. ಗೌರವಾನಿತ್ವ ಉಚ್ಛ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಪ್ರೊ.ಎಲ್.ದೇವಿಕಾರಾಣಿ ಇವರನ್ನು ಇಂಗ್ಲೀಷ್ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ತಕ್ಷಣದಿಂದ ಜಾರಿಗೆ ಬಂದಂತೆ ಮುಂದುವರೆಸಲು<br><br>ಹಾಗೂ |

| | |
|---|---|
| | 2. ವಿಚಾರಣೆಯನ್ನು ಮೂರು ತಿಂಗಳ ಒಳಗಾಗಿ ಪೂರ್ಣಗೊಳಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು. |
| ಸಾಮಾನ್ಯ ಸಭೆ 2021/1.18 | Promotions to University Teachers Under UGC-CAS |
| ತೀರ್ಮಾನ | The recommendations of the Selection Committee and Screening cum Evaluation Committee in various subjects for promotion of teachers in various disciplines to the higher AGP furnished at Annexure–A is approved. Further, the syndicate has also decided to extend the monetary benefits to the teachers from the date of the Syndicate dicision i.e. 25-11-2020 or from the date of eligibility whichever is later. |
| ಸಾಮಾನ್ಯ ಸಭೆ 2021/1.19 | ಅಧ್ಯಯನ ಮಂಡಳಗಳನ್ನು ಪುನರ್‌ರಚಿಸಿರುವ ಹಾಗೂ ಹೊಸದಾಗಿ ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಶೈಕ್ಷಣಿಕ ಹಿತದೃಷ್ಟಿಯಿಂದ ಈ ಕೆಳಕಂಡ ಅಧ್ಯಯನ ಮಂಡಳಗಳನ್ನು ಮೂರು ವರ್ಷಗಳ ಅವಧಿಗೆ ಪುನರ್‌ರಚಿಸಿ ಅಧಿಸೂಚನೆಯನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಸಮರ್ಥಿಸಿತು.<br>1. B.Sc.(Hon's) (Advanced Agriculture), B.Sc. (Biomedical Science), B.Sc. (Artificial Intelligence & Data Analytics) (UG)<br>2. M.Des. (Fashion Design Management) and M.Des. (Interior Design Management)<br>3. PG Diploma in E-Commerce and Digitization (PG)<br>4. B.Sc. (Animation & VFX) (UG)<br>5. BBA (Catering & Hotel Management), BBA (Interior Design), BBA (Airline & Airport Management), BBA (Costume Design & Fashion Technology) (UG)<br>6. B.Sc. (Interior Design & Decorat ion) and B.Voc (Interior Design) (UG)<br>7. B.Voc (Digital Architecture) (UG)<br>8. Post Graduate Program of IMBA (PG)<br>9. Chemical Biology (PG) |
| ಸಾಮಾನ್ಯ ಸಭೆ 2021/1.20 | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರ ಬಾಡಿಗೆ ಕಟ್ಟಡದ ಕರಾರಿನ ಬಗ್ಗೆ. |
| ತೀರ್ಮಾನ | ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜು, ಮೈಸೂರು ಇವರ ಬಾಡಿಗೆ ಕಟ್ಟಡದ ಕರಾರಿನ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಈಗಾಗಲೇ ರಚಿಸಲಾಗಿರುವ ಸಮಿತಿಯ ವರದಿಯನ್ವಯ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |

**ಇತರೆ ವಿಷಯಗಳು:**

- 8ನೇ ಸಾಮಾನ್ಯ ಸಭೆಯ ನಡಾವಳಿಯನ್ನು ದೃಢೀಕರಿಸುವ ಮೊದಲು ಸಭೆಯ ಕಾರ್ಯಸೂಚಿ 12.14ರ ಅಡಿಯಲ್ಲಿ ಚರ್ಚಿಸಲಾಗಿದ್ದ ಪಿಹೆಚ್.ಡಿ ನಿಯಮಾವಳಿ2017ರ ತಿದ್ದುಪಡಿ ನಿರ್ಣಯವನ್ನು ಪುನರ್ ಪರಿಶೀಲಿಸಿತು. ಸಿಂಡಿಕೇಟ್ ಸಭೆಯು ಪೂರ್ವದಲ್ಲಿದ್ದ ನಿಯಮಾವಳಿಗಳನ್ವಯ The Candidates who

have passed M.Phil examination from any regular UGC recognized University/institutions are exempted from the Ph.D entrance examination ಎಂಬ ಅರ್ಹತೆಯನ್ನು ಪರಿಗಣಿಸಿ ಪಿ.ಹೆಚ್.ಡಿ ಪ್ರವೇಶಾತಿಯನ್ನು *2021-22ನೇ ಶೈಕ್ಷಣಿಕ ಸಾಲಿಗೆ ಮಾತ್ರ ಸೀಮಿತಗೊಳಿಸಿ ಪೂರ್ಣಗೊಳಿಸಲು ಒಪ್ಪಿಗೆ ಸೂಚಿಸಿತು. *( March 1st 2021, to Feb-2022).

- ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿ, ನಿರ್ಗಮಿಸುವರಿಗೆ ಬೀಳ್ಕೊಡುಗೆ ಸನ್ಮಾನವನ್ನು ಸೇವೆಯಲ್ಲಿರುವಾಗಲೇ ಕೊನೆಯ ಸಿಂಡಿಕೇಟ್ ಸಭೆಯಲ್ಲಿ ಏರ್ಪಡಿಸಲಾಗುವುದು.

- ಗುತ್ತಿಗೆ ಅಧ್ಯಾಪಕರುಗಳಿಗೆ ಪಿಎಚ್.ಡಿ., ಮಾರ್ಗದರ್ಶನಕ್ಕಾಗಿ ನೇಮಿಸುವ ಬಗ್ಗೆ ಆದೇಶ ನೀಡುವ ಸಂಬಂಧ ರಚಿಸಿದ ಸಮಿತಿಯನ್ನು ರದ್ದುಗೊಳಸುವ ವಿಷಯವನ್ನು ದೃಢೀಕರಿಸಿ ಸೇರ್ಪಡಿಸಲಾಯಿತು.

ಮಾನ್ಯ ಸದಸ್ಯರಾದ ಶ್ರೀ.ಎಸ್.ಡಿ.ದೊಡ್ಡಚಾರಿರವರು ಮಾತನಾಡಿ, ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್ ಕೇಂದ್ರದಲ್ಲಿರುವ ಖಾಯಂ ಅಧ್ಯಾಪಕ/ಅಧ್ಯಾಪಕೇತರರು, ಅತಿಥಿ ಉಪನ್ಯಾಸಕರು ಮತ್ತು Self Finance Scheme ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವವರು, ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳ ಪ್ರವೇಶಾತಿ ವಿವರಗಳ ಬಗ್ಗೆ ಮಾಹಿತಿ ಮತ್ತು ಕಳೆದ 5 ವರ್ಷಗಳ ಅವಧಿಯಲ್ಲಿ ಬಂದ ಆಧಾಯ(ರೆವಿನ್ಯೂ)ದ ವಿವರಗಳನ್ನು ನೀಡಬೇಕೆಂದು ಸಭೆಯನ್ನು ಕೋರಿದರು.

- ಸಿಂಡಿಕೇಟ್ ಸದಸ್ಯರು ಇನ್ನು ಮುಂದೆ ಯಾವುದೇ ವಿಷಯವನ್ನು ಮೌಖಿಕವಾಗಿ ಸಭೆಯಲ್ಲಿ ಪ್ರಸ್ತಾಪಿಸುವ ಬದಲು ಪತ್ರದ ಮೂಲಕ ಕೋರಿ ಮಾಹಿತಿಯನ್ನು ಪಡೆಯಲು ಸಿಂಡಿಕೇಟ್ ತೀರ್ಮಾನಿಸಿತು.

- ವಿಭಾಗದ ಅಧ್ಯಕ್ಷರ ನೇಮಕವು ಆಡಳತಾತ್ಮಕ ವಿಚಾರವಾಗಿರುವುದರಿಂದ ಅಧಿಕಾರವನ್ನು ಇನ್ನು ಮುಂದೆ ಮಾನ್ಯ ಕುಲಪತಿಯವರಿಗೆ ನೀಡಲು ಸಿಂಡಿಕೇಟ್ ಸಭೆಯು ಒಪ್ಪಿತು.

- ಅನುಕಂಪ ಆಧಾರದ ಮೇಲೆ ಶ್ರೀಮತಿ ನೇತ್ರಾವತಿಯವರು ನೇಮಕವಾಗಿದ್ದು ಅವರ ದಾಖಲಾತಿಗಳಲ್ಲಿ ಸಹಿ ವ್ಯತ್ಯಾಸವಿರುವುದರಿಂದ ಅದನ್ನು ಪರಿಶೀಲಿಸಬೇಕಾಗಿ ಸಿಂಡಿಕೇಟ್ ಸದಸ್ಯರಾದ ಶ್ರೀ ದೊಡ್ಡಚಾರಿಯವರು ತಿಳಸಿದರು.

- ಅತಿಥಿ ಉಪನ್ಯಾಸಕರಿಗೆ ಕೋವಿಡ್ ಸಂದರ್ಭದಲ್ಲಿ ಎರಡು ತಿಂಗಳ ವೇತನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪತ್ರ ಬರೆಯುವುದಾಗಿಯೂ ಸರ್ಕಾರದಿಂದ ಅನುದಾನ ಬಿಡುಗಡೆಯಾದಲ್ಲಿ ಮಾತ್ರ ವೇತನವನ್ನು ನೀಡುವುದಾಗಿ ಕುಲಪತಿಯವರು ತಿಳಸಿದರು.

- ಕೋವಿಡ್-19 ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಐದು ವರ್ಷ ಪೂರ್ಣಗೊಂಡ ಸಂಶೋಧನ ವಿದ್ಯಾರ್ಥಿಗಳಿಗೆ ಮಾತ್ರ ಮಾನವೀಯತೆ ದೃಷ್ಟಿಯಿಂದ ಹೆಚ್ಚುವರಿಯಾಗಿ 4 ತಿಂಗಳ ಶಿಷ್ಯವೇತನವನ್ನು ಹಾಗೂ ಮಹಾಪ್ರಬಂಧವನ್ನು ಸಲ್ಲಿಸಲು 6 ತಿಂಗಳು ಕಾಲಾವಕಾಶವನ್ನು ನೀಡಲಾಗುವುದು.

- National Council of Teacher Education ವತಿಯಿಂದ ಯುವರಾಜ ಕಾಲೇಜಿಗೆ 4 ವರ್ಷದ B.Sc.Ed ಕೋರ್ಸ್‌ನ್ನು ಪ್ರಾರಂಭಿಸಲು ಅನುಮತಿ ನೀಡಿದ್ದು. ಪ್ರಸಕ್ತ ಸಾಲಿನಲ್ಲಿ 50 ವಿದ್ಯಾರ್ಥಿಗಳಿಗೆ ಪ್ರವೇಶಾತಿಯನ್ನು ಸೀಮಿತಗೊಳಸಲಾಗಿದೆ ಹಾಗೂ 50% ಅನುದಾನ ಕೇಂದ್ರದಿಂದ ಬಿಡುಗಡೆ ಮಾಡುವುದರ ಬಗ್ಗೆ ಕುಲಪತಿಯವರು ಸಭೆಯಲ್ಲಿ ಪ್ರಸ್ತಾಪಿಸಿದರು ಮತ್ತು ಬೇಡಿಕೆಗೆ ಅನುಗುಣವಾಗಿ ಪ್ರತಿ ವರ್ಷ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸುವುದಾಗಿ ತಿಳಸಿದರು.

- ವ್ಯಾಸ ವಾಲ್ಮಿಕಿ ಅಧ್ಯಯನ ಪೀಠ ಶೀಘ್ರದಲ್ಲೇ ಪ್ರಾರಂಭ ಮಾಡಲಾಗುವುದು ಹಾಗೂ ಸಿಂಡಿಕೇಟ್ ಸಭೆಯ ನಂತರ ಕೆಲವು ಮುಖ್ಯಾಂಶಗಳನ್ನು ಕುಲಪತಿಯವರ ಅನುಮತಿ ಮೇರೆಗೆ ಪ್ರೆಸ್‌ಮೀಟ್‌ನಲ್ಲಿ/ಪೇಪರ್/ ಟಿವಿ ಮಾಧ್ಯಮಗಳಿಂದ ಪ್ರಸಾರ ಮಾಡುವುದರ ಬಗ್ಗೆ ಕ್ರಮ ವಹಿಸುವುದು.

- Whatsapp/youtubeನಲ್ಲಿ ತಪ್ಪು ಮಾಹಿತಿಯನ್ನು ಪ್ರಚಾರ ಮಾಡುವವರ ವಿರುದ್ಧ ಸೈಬರ್ ಕ್ರೈಮ್‌ನಲ್ಲಿ ದೂರು ದಾಖಲಿಸುವುದು ಹಾಗೂ ತಪ್ಪಿಸ್ಥರ ವಿರುದ್ಧ ಶಿಸ್ತು ಕ್ರಮ ಜರುಗಿಸುವುದು.

- ಮುಂದಿನ ದಿನಗಳಲ್ಲಿ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳಿಗೆ ಸರ್ಕಾರದ ನೆರವಿನೊಡನೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಅಗತ್ಯ ಕ್ರಮ ಜರುಗಿಸಲಾಗುವುದು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದ ಸದಸ್ಯರುಗಳಿಗೆ ವಂದನೆಗಳನ್ನು ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ | ಕುಲಪತಿ ಮತ್ತು ಅಧ್ಯಕ್ಷರು